



# ಬೆಲ್ಲ ಕಲಬೆರಕೆ ಸಲ್ಲ

**ಕ್ಷಣಮಾತ್ರದಲ್ಲಿ ಆಯಾಸ ನಿವಾರಿಸಬಲ್ಲ ನೀರಿನ ಜತೆಗಿನ ಬೆಲ್ಲದ ವೈಜ್ಞಾನಿಕ ಅಂಶಗಳ ಬಗ್ಗೆ ನಿಮಗೆಷ್ಟು ಗೊತ್ತು?**

**ಅರುಣ್ ಇಸ್ಲೂರ್**

ಪುಟ್ಟ ಮಗುವಿನಿಂದ ಹಿಡಿದು ವಯೋವೃದ್ಧರಿಗೂ ಬಲು ಪ್ರಿಯವಾದ ವಸ್ತು ಒಂದು ಚಿಕ್ಕದಾದ ಬೆಲ್ಲದ ತುಂಡು ಎಂದು ಬೇರೆ ಹೇಳಬೇಕಿಲ್ಲ. ಈ ಹಿಂದಿನ ದಿನಗಳಲ್ಲಿ ಬೇಸಿಗೆಯ ದಿನಗಳಲ್ಲಿ ಒಂದು ಚೂರು ಬೆಲ್ಲದೊಡನೆ ನೀರನ್ನು ಸೇವಿಸುವಾಗ ಉಂಟಾಗುವ ಆನಂದ ಅಮೃತಕ್ಕಿಂತಲೂ ಮಿಗಿಲು. ಹಾಗೂ ಕೆಲವೇ ಕ್ಷಣಗಳಲ್ಲಿ ಎಂತಹದೇ ದಣಿವು ಸಂಪೂರ್ಣವಾಗಿ ಮಾಯವಾಗುತ್ತಿತ್ತು. ಬಾಯಾರಿಕೆ ಎಂದಕ್ಷಣ ಕೇವಲ ಬಾಟಲಿಗಳಲ್ಲಿ ದೊರೆಯುವ ನೀರನ್ನೇ ಸೇವಿಸುವ ಇಂದಿನ ಯುವ ಜನತೆಗೆ ಬೆಲ್ಲ–ನೀರಿನ ಅನುಭವವಿಲ್ಲ.

ಬೆಲ್ಲ ಹಾಗೂ ಸಕ್ಕರೆ ಕಬ್ಬಿನ ರಸದಿಂದಲೇ ತಯಾರಿಸಲ್ಪಟ್ಟು ಸಿಹಿಯಾಗಿದ್ದರೂ, ಅವುಗಳ ಬಣ್ಣ ಹಾಗೂ ಇತರೇ ಗುಣ ಧರ್ಮಗಳಲ್ಲಿ ಅಜಗಜಾಂತರ ವ್ಯತ್ಯಾಸವಿದೆ. ಹಲವಾರು ಶತಮಾನಗಳಿಂದ ಭಾರತ, ಆಫಘಾನಿಸ್ತಾನ, ಆಫ್ರಿಕಾ ಮುಂತಾದ ದೇಶಗಳಲ್ಲಿ ಬೆಲ್ಲವನ್ನು ವಿಶೇಷವಾದ ದಿನಗಳಲ್ಲಿ ಸಿಹಿ ತಿನಿಸುಗಳ ತಯಾರಿಸುವಿಕೆಯಲ್ಲಿ ಬಳಸುತ್ತಲಿದ್ದರು. ಹಳದಿ, ಕೆಂಪು, ಕಪ್ಪು ಹೀಗೆ ಹಲವಾರು ಬಣ್ಣಗಳಲ್ಲಿ ದೊರೆಯುವ ನೈಸರ್ಗಿಕವಾಗಿ ತಯಾರಿಸಲಾದ ಬೆಲ್ಲವು. ಬಿಳಿಬಣ್ಣದ ಸ್ಪಟಿಕಾಕೃತಿಯ ಸಕ್ಕರೆಗಿಂತಲೂ ಬಲು ಭಿನ್ನ. ಸಕ್ಕರೆ ಹಾಗೂ ಬೆಲ್ಲವನ್ನು ತಯಾರಿಸುವಾಗ ಕಬ್ಬಿನ ರಸವನ್ನು ಕುದಿಸುವಾಗ, ಸಕ್ಕರೆ ತಯಾರಿಸುವಾಗ ಬಿಸಿ ಕಬ್ಬಿನ ರಸವನ್ನು ಪ್ರಾಣಿಗಳ ಮೂಳೆಗಳ ಇದ್ದಿಲಿನೊಡನೆ ವರ್ತಿಸಿದಾಗ ಸ್ಪಟಿಕಾಕೃತಿಯ ಶುಭ್ರ ಸಕ್ಕರೆಯು



